(ಇಂದು ದಿನಾಂಕಃ 23-10-2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ವಾದಿ ಪರಃ ಶ್ರೀ ಎಸ್.ಆರ್.ಬಿ. ವಕೀಲರಿಂದಃ**

ನಾನು ಪದವಿವರೆಗೆ ಓದಿದ್ದೇನೆ. ನಾನು ಕೂಲಿ ಕೆಲಸ ಮಾಡುತ್ತೇನೆ. ನನಗೆ ಮದುವೆಯಾಗಿದೆ. ನನ್ನ ಹೆಂಡತಿ ಮಕ್ಕಳು ನನ್ನೊಂದಿಗೆ ವಾಸವಾಗಿದ್ದಾರೆ. ನನ್ನ ಹೆಂಡತಿ ನನ್ನೊಂದಿಗೆ ಗಲಾಟೆ ಮಾಡಿಕೊಂಡು ಹೋಗಿದ್ದಾಳೆ ಎಂದರೆ ಸಾಕ್ಷಿ ಹೋಗುತ್ತಿರುತ್ತಾಳೆ ಮತ್ತು ಬರುತ್ತಿರುತ್ತಾಳೆ ಎಂದು ಹೇಳುತ್ತಾರೆ. ಮದುವೆಯಾದಾಗಿನಿಂದ ನನ್ನ ಹೆಂಡತಿಯೊಂದಿಗೆ ಮನಸ್ತಾಪ ಇದೆ ಎಂದರೆ ಸರಿಯಲ್ಲ. ನನ್ನ ಹೆಂಡತಿಗೆ ನಾನು ವರದಕ್ಷಿಣೆ ಕಿರುಕುಳ ಕೊಟ್ಟಿದ್ದರಿಂದ ನನ್ನ ಹೆಂಡತಿ ತವರುಮನೆಯಲ್ಲಿ ವಾಸವಾಗಿದ್ದಾಳೆ ಎಂದರೆ ಸರಿಯಲ್ಲ. ನನ್ನ ಮತ್ತು ನನ್ನ ಹೆಂಡತಿಯ ಮಧ್ಯೆ ಸಣ್ಣ ಪುಟ್ಟ ಮನಸ್ತಾಪಗಳು ಇವೆ.

ಮೃತ್ಯುಪತ್ರವನ್ನು ಬರೆಯಲು ಯಾರು ವಕೀಲರಿಗೆ ಮಾಹಿತಿಯನ್ನು ಕೊಟ್ಟಿದ್ದಾರೆ ಎಂದರೆ ಸಾಕ್ಷಿ ನಮ್ಮ ಅಣ್ಣ ಮಾಹಿತಿ ಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ನಮ್ಮ ಅಣ್ಣ ವಕೀಲರಿಗೆ ಮಾಹಿತಿ ಕೊಡುವಾಗ ನಾನು ಮತ್ತು ನಮ್ಮ ತಂದೆ ನಮ್ಮ ಅಣ್ಣನೊಂದಿಗೆ ಹಾಜರು ಇದ್ದರು. ಮೃತ್ಯುಪತ್ರದ ಬಗ್ಗೆ ಮಾಹಿತಿಯನ್ನು ವಕೀಲರಿಗೆ ಯಾವಾಗ ಅಥವಾ ಎಷ್ಟು ವರ್ಷದ ಹಿಂದೆ ಕೊಡಲಾಗಿದೆ ಎಂದು ನನಗೆ ಹೇಳಲು ಬರುವುದಿಲ್ಲ. ಶ್ರೀ ಎಸ್.ಎಂ. ದುರ್ಗೇಕರ್, ವಕೀಲರು ಮೃತ್ಯುಪತ್ರವನ್ನು ತಯಾರಿಸಿದ್ದಾರೆ. ಸದರಿ ವಕೀಲರ ಕಚೇರಿಗೆ ನಾನು ಮೃತ್ಯುಪತ್ರದ ಸಲುವಾಗಿ ಒಂದೇ ಬಾರಿ ಹೋಗಿದ್ದೆ. ಬೆಳಿಗ್ಗೆ 10.00 ಗಂಟೆಯಿಂದ ಮಧ್ಯಾಹ್ನ 2.00 ಗಂಟೆಯವರೆಗೆ ವಕೀಲರ ಕಚೇರಿಯಲ್ಲಿ ಇದ್ದೆ. ನಮ್ಮ ಅಣ್ಣ ಹೇಳಿದ ಹಾಗೆ ವಕೀಲರು ಮೃತ್ಯುಪತ್ರವನ್ನು ಬೆರಳಚ್ಚು ಮಾಡಿಸಿದ್ದಾರೆ. ದುರ್ಗೇಕರ್ ವಕೀಲರ ಕಚೇರಿಯಲ್ಲಿ ಗಣಕಯಂತ್ರ ಇದೆ ಎಂದರೆ ಸರಿ. ಮೃತ್ಯುಪತ್ರದಲ್ಲಿ ಬರೆದ ವಿಷಯವನ್ನು ಓದಿ ತಿಳಿದುಕೊಂಡಿದ್ದೇನೆ. ನಮ್ಮ ಅಣ್ಣ ಮೃತ್ಯುಪತ್ರವನ್ನು ಬರೆಯುವ ವಿಷಯವನ್ನು ನನಗೆ ವಕೀಲರ ಕಚೇರಿಯಲ್ಲಿ ಹೇಳಿದ್ದಾರೆ. ಮೃತ್ಯುಪತ್ರವನ್ನು ದಿನಾಂಕ 14-03-2020 ರಂದು ಬರೆದಿದ್ದಾರೆ. ಆ ಸಮಯದಲ್ಲಿ ನಮ್ಮ ಅಣ್ಣನ

ಹೆಂಡತಿ ನನ್ನ ಅಣ್ಣ ಮತ್ತು ಕುಟುಂಬದ ಎಲ್ಲ ಸದಸ್ಯರ ವಿರುದ್ಧ ಕೌಟುಂಬಿಕ ದೌರ್ಜನ್ಯ ಕಾಯಿದೆ ಅಡಿಯಲ್ಲಿ ಪ್ರಕರಣ ದಾಖಲಿಸಿದ್ದರು ಎಂದರೆ ಸರಿ. ಸದರಿ ಕ್ರಿಮಿನಲ್ ಮಿಸ್. ಸಂಖ್ಯೆ 79/2019 ರಂತೆ ಪ್ರಕರಣ ದಾಖಲಾಗಿತ್ತು ಎಂದರೆ ನನಗೆ ನೆನಪಿಲ್ಲ. ಸದರಿ ಕೇಸಿನಲ್ಲಿ ನಾವು ಜಾಂಬವಳಿಕರ ವಕೀಲರನ್ನು ನೇಮಕ ಮಾಡಿಕೊಂಡಿದ್ದೆವು ಎಂದರೆ ಸರಿ. ಸದರಿ ಕೇಸನ್ನು ನಾವು ರಾಜಿ ಮಾಡಿಕೊಳ್ಳುತ್ತೇವೆ ಎಂದು ಹೇಳಿದ್ದೇವೆ ಎಂದರೆ ಸರಿಯಲ್ಲ, ಸಾಕ್ಷಿ ಅವರೇ ಹೇಳಿದ್ದಾರೆ ಎಂದು ಹೇಳುತ್ತಾರೆ. ವಾದಿಗೆ ನಾವು ಮಾನಸಿಕವಾಗಿ ಹಿಂಸೆ ಕೊಡುತ್ತಿದ್ದೆವು ಎಂದರೆ ಸರಿಯಲ್ಲ.

ದಾವೆ ದಾಖಲಾದ ನಂತರ ಸಮನ್ಸ್ ನನಗೆ ಜಾರಿಯಾಗಿತ್ತು ಎಂದರೆ ಸರಿಯಲ್ಲ. ಈ ದಾವೆ ಈ ಹಿಂದೆ ನಿಖಾಲೆಯಾಗಿದ್ದು ಯಾವಾಗ ಆಗಿದೆ ಎಂದು ನನಗೆ ನೆನಪಿಲ್ಲ. 4 ನೇ ಪ್ರತಿವಾದಿ ದಾವಾಸ್ತಿಗೆ ಸಂಬಂಧಿಸಿದಂತೆ ಪ್ರಣವ್ ಇವರ ವಿರುದ್ಧ ಓ.ಎಸ್. ನಂ. 118/2022 ರಂತೆ ದಾವೆ ದಾಖಲು ಮಾಡಿದ್ದರು ಎಂದರೆ ಸರಿ. ಸದರಿ ದಾವೆಯನ್ನು ಮೃತ್ಯುಪತ್ರದ ಸಂಬಂಧವಾಗಿ ಹಾಕಿದ್ದರು. ಮೃತ್ಯುಪತ್ರದ ಮೇಲೆ ದುರ್ಗೆಕರ್ ವಕೀಲರು ನನ್ನ ಸಹಿ ಪಡೆದುಕೊಂಡಿಲ್ಲ. ಮೃತ್ಯುಪತ್ರ ತಯಾರಿಸಿದ ನಂತರ ವಕೀಲರು ನಮ್ಮ ಅಣ್ಣ ಸುರೇಶ ಇವರ ಕೈಯಲ್ಲಿ ಕೊಟ್ಟಿದ್ದಾರೆ. ಸದರಿ ಮೃತ್ಯುಪತ್ರ ನಮ್ಮ ಅಣ್ಣ ಸುರೇಶ ಇವರು ಮೃತ್ಯುಪತ್ರವನ್ನು 4 ನೇ ಪ್ರತಿವಾದಿ ಬಳಿ ಕೊಟ್ಟಿದ್ದರು. ಯಾವಾಗ ಕೊಟ್ಟಿದ್ದರು ಎಂದು ನನಗೆ ಗೊತ್ತಿಲ್ಲ. ಮೃತ್ಯುಪತ್ರದ ಪ್ರಕಾರ ಆಸ್ತಿಗಳು 4 ನೇ ಪ್ರತಿವಾದಿಯ ಮಗನಿಗೆ ಹೋಗಬೇಕು ಎಂದು ಇದೆ.

ಮೃತ್ಯುಪತ್ರದ ಬಗ್ಗೆ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿಯಲ್ಲಿ ತಿಳಿಸಿಲ್ಲ ಅನ್ನುವುದು ಸರಿಯಲ್ಲ. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ್ಯುಪತ್ರ 5 ರಿಂದ 6 ಪುಟಗಳಲ್ಲಿ ಇದೆ. ನಮ್ಮ ಅಣ್ಣ ಪ್ರತಿಯೊಂದು ಪುಟಕ್ಕೂ ಸಹಿ ಹಾಕಿದ್ದಾರೆ. ನಾನು ಮತ್ತು ನಮ್ಮ ತಂದೆಯವರು ಸೇರಿ ಮೃತ್ಯುಪತ್ರವನ್ನು ಸೃಷ್ಠಿ ಮಾಡಿದ್ದೇವೆ ಅಂದರೆ ಸರಿಯಲ್ಲ. ನಮ್ಮ ಅಣ್ಣ ಸುರೇಶ ಯಾವತ್ತೂ ಕೂಡ ಮೃತ್ಯುಪತ್ರವನ್ನು ಬರೆದಿಲ್ಲ ಅನ್ನುವುದು ಸರಿಯಲ್ಲ. ನಮ್ಮ ಅಣ್ಣ ಸುರೇಶ ಕ್ರಿ.ಮಿಸ್. ನಂ. 79/2019 ರಲ್ಲಿ ಮೃತ್ಯುಪತ್ರವನ್ನು ಬರೆದಿಲ್ಲ, ಒಂದುವೇಳೆ ಆ ರೀತಿ ಯಾವುದಾದರೂ ದಾಖಲಾತಿ ಇದ್ದರೆ ಅದನ್ನು

ರದ್ದುಪಡಿಸಿದ್ದೇನೆ ಎಂದು ಹೇಳಿದ್ದಾರೆ ಎಂದರೆ ಸರಿಯಲ್ಲ. ವಾದಿಗೆ ದಾವಾಸ್ವತ್ತುಗಳಲ್ಲಿ ಕಾನೂನುಬದ್ಧ ಹಕ್ಕು ಇದ್ದರೂ ಸಹ ಅವಳಿಗೆ ಆಸ್ತಿ ಕೊಡಬಾರದು ಎಂಬ ಉದ್ದೇಶದಿಂದ ಸುಳ್ಳು ಪ್ರತಿವಾದ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಒಂದುವೇಳೆ ನಮ್ಮ ಅಣ್ಣ ಸುರೇಶ ಮೃತ್ಯುಪತ್ರ ಬರೆದಿದ್ದೇ ಆಗಿದ್ದರೆ ಇದೇ ಪ್ರಕರಣದ ಆರಂಭದಲ್ಲಿ ಮೃತ್ಯುಪತ್ರದ ಬಗ್ಗೆ ಹೇಳುತ್ತಿದ್ದೆವು ಎಂದರೆ ಸರಿಯಲ್ಲ. ನಾನು ಮತ್ತು ನನ್ನ ತಂದೆ ವಾದಿಗೆ ದೈಹಿಕವಾಗಿ ಮತ್ತು ಮಾನಸಿಕವಾಗಿ ಹಿಂಸೆ ಕೊಟ್ಟಿದ್ದೇವೆ ಅನ್ನುವುದು ಸರಿಯಲ್ಲ. ಆದ್ದರಿಂದ ವಾದಿ ನಮ್ಮ ವಿರುದ್ಧ ಕೌಟುಂಬಿಕ ದೌರ್ಜನ್ಯ ಕಾಯಿದೆ ಅಡಿಯಲ್ಲಿ ನಮ್ಮ ವಿರುದ್ಧ ಪ್ರಕರಣ ದಾಖಲಿಸಿದ್ದರಿಂದ ಮೃತ್ಯುಪತ್ರ ನಮ್ಮ ಅಣ್ಣ ಸುರೇಶ ಬರೆದಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್, ಕಾರವಾರ